ನೀನೇ ಇರಬಹುದೆಂದು ನಾವು ತರ್ಕಿಸಿದೆವು. ದಿನಾಲು ನಾನು ಅಹಾರವಿಟ್ಟಿದ್ದ ಟಿನ್ ಅನ್ನು ಬಡಿಯುವುದೂ ನೀನು ಆ ಸದ್ದಿಗೆ ಬರುವುದೂ ರೂಢಿಯಾಗಿತ್ತು. ನನ್ನ ಹೆಂಡತಿ ಟಿನ್ ತಂದು ಮುಚ್ಚಳವನ್ನು ತಟ್ಟಲು ಸೂಚಿಸಿದಳು. ಅವಳ ಲೆಕ್ಕಾಚಾರ ಸರಿ ಇತ್ತು; ನೀನು ನೇರ ಹಾರಿ ಬಂದು ನನ್ನ ಹೆಗಲೇರಿದೆ; ಖುಷಿಯಿಂದ ನಮ್ಮ ಸವಾರಿ ಅಟ್ಟದ ಕೋಣೆಗೆ ಸಾಗಿತು.

ಬೆಳಿಗ್ಗೆ ಒಂದಿಷ್ಟು ಕಾಳು ತಿಂದು ನೀನು ಲೋಕ ಸಂಚಾರಕ್ಕೆ ಹೋಗಿ ಬಿಡುತ್ತಿದ್ದೆ. ಸಂಜೆ ಐದರ ಹೊತ್ತಿಗೆ ತಾರಸಿಯ ಕಟ್ಟೆಯ ಮೇಲೆ ಪ್ರತ್ಯಕ್ಷವಾಗುತ್ತಿದ್ದೆ. ಶಾಲೆಗೆ ಹೋಗುತ್ತಿದ್ದ ನನ್ನ ಮಗಳು ಸಂತಸದಲ್ಲಿ ಉಕ್ಕುತ್ತ ಮನೆಗೆ ಬರುತ್ತಿದ್ದ ದಿನಗಳು ನನಗೆ ನೆನಪಾದವು. ತಾರಸಿಯ ಕಟ್ಟೆಯ ಮೇಲೆ ಕೂತು ಕೆಳಗೆ ಕೇರಿಯ ರಸ್ತೆಯಲ್ಲಿ ಸಂಚರಿಸುತ್ತಿದ್ದವರನ್ನು ನೋಡುತ್ತಿದ್ದೆ. ಎದುರಿನ ಮನೆಯವರ ಜೊತೆ ಗೇಟಿಗೆ ಚಾಚಿ ಮಾತಾಡುತ್ತ ನಿಲ್ಲುತ್ತಿದ್ದ ನನ್ನ ಹೆಂಡತಿಯ ಹೆಗಲೇರುತ್ತಿದ್ದೆ. ಕೇರಿಯವರಿಗೆ ನಿನ್ನ ತುಂಟ ಸಲಿಗೆ ಅಚ್ಚರಿ ಉಂಟು ಮಾಡಿತ್ತು. ಹಕ್ಕಿಯೊಂದು ಹೀಗೆ ಮನುಷ್ಯರ ಸ್ನೇಹಕ್ಕೆ ಒದಗಿರುವುದು ಸಹಜವಾಗಿಯೇ ವಿಚಿತ್ರವೆನಿಸಿತ್ತು. ನನ್ನ ಹೆಂಡತಿ ಯಾರ ಮನೆಗೆ ಹೋಗುವುಳೊ ಯಾರೊಂದಿಗೆ ಮಾತಾಡುವುಳೊ ಅವರೊಟ್ಟಿಗೆ ನಿನ್ನ ಒಡನಾಟವಿರುತ್ತಿತ್ತು. ನಿನ್ನ ತುಂಟತನ ಕಿರಿಕಿರಿಯಾದಾಗ ಅವಳು ಬೆದರಿಸಿದರೆ ನಿನ್ನ ಸ್ವಾಭಿಮಾನ ಜಾಗ್ರತವಾಗಿ ಚುಂಚಿನಿಂದ ಚುಚ್ಚುತ್ತಿದ್ದೆ. ಮುಸ್ಸಂಜೆಯ ಆಟ ಮುಗಿಸಿ ನಿನ್ನ ಕೋಣೆಗೆ ಹಾರಿ ಹೋಗುತ್ತಿದ್ದೆ. ಆ ಕೋಣೆ ತನ್ನ ಸ್ವಂತದ್ದೆಂದು ನೀನು ಹಠ ಹಿಡಿದು ಹಕ್ಕು ಚಲಾಯಿಸುತ್ತಿದ್ದೆ. ಅಲ್ಲಿಂದ ನಿನ್ನನ್ನು ಹೊರಗೆ ಕಳುಹಿಸಲು ಸಾಧ್ಯವೇ ಇರಲಿಲ್ಲ. ಒಮ್ಮೊಮ್ಮೆ ಹೊರಗಟ್ಟುತ್ತಿದ್ದಾಗ ನೀನು ಎಲ್ಲ ಕಿಟಕಿಗಳಲ್ಲಿ ಇಣುಕಿ ಚುಂಚಿನಿಂದ ಗಾಜನ್ನು ಕುಟ್ಟುತ್ತಿದ್ದೆ. ಎಲ್ಲೊ ಕೂತಿರುತ್ತಿದ್ದ ನೀನು ಕದ ತೆರೆದೊಡನೆಯೇ ಒಳಗೆ ನುಸುಳುತ್ತಿದ್ದೆ. ಹಾಗೆ ನಿನ್ನನ್ನು ಮನೆ ಹೊರಗೆ ಅಟ್ಟುತ್ತಿದ್ದ ನಮ್ಮ ಕ್ರೂರ ನಡತೆಯ ಬಗ್ಗೆ ನಮಗೆ ಪಶ್ಚಾತ್ತಾಪವಾಯಿತು. ನಿನ್ನ ಈ ಎಲ್ಲ ಬಾಲಲೀಲೆಗಳ ಕತೆಗಳನ್ನು ಕೇರಿಯವರಿಗೆ ನಿರೂಪಿಸಿ ಸಂತಸ ಪಡುತ್ತಿದ್ದೆವು.

ನಿನಗೆ ಮನೆಯ ಎಲ್ಲ ರೂಮುಗಳನ್ನು ನೋಡುವ ಕುತೂಹಲ. ಅಟ್ಟದ ಮೆಟ್ಟಲುಗಳನ್ನು



ವೈಯಾರದಿಂದಿಳಿದು ಸುತ್ತಾಡುತ್ತಿದ್ದೆ. ನನ್ನ ಹೆಂಡತಿಯ ಹಿಂದೆ ನಿನ್ನ ಬಿಂಕದ ನಡಿಗೆ ಮೋಜಾಗಿರುತ್ತಿತ್ತು. ನಾವು ಮುಂಜಾನೆ ದಿನಪತ್ರಿಕೆಯನ್ನು ಓದುತ್ತಿರುವಾಗ ನೀನು ಅಟ್ಟದಿಂದ ಹಾರಿ ಬಂದು ನಮ್ಮ ಮಡಿಲು, ಹೆಗಲು, ಭುಜ ಏರಿ ಪೀಡಿಸುತ್ತಿದ್ದೆ. ಮರುಕ್ಷಣ ನಿನ್ನ ಎಂದಿನ ಲೋಕ ಸಂಚಾರಕ್ಕೆ ಹಾರಿ ಹೋಗುತ್ತಿದ್ದೆ. ಮನೆಗೆ ಮಕ್ಕಳು ಶಾಲೆಯಿಂದ ಪ್ರತಿ ದಿನ ಸಂಜೆ ಮರಳುತ್ತಿದ್ದಂತೆ ನೀನು ಐದು ಗಂಟೆಗೆ ಹಾಜಾರಾಗಿ ಬಿಡುತ್ತಿದ್ದೆ. ಹಗಲಿಡೀ ನೀನು ಎಲ್ಲಿ ಹೋಗುತ್ತಿದ್ದೆ, ಯಾರ ಜತೆ ಇರುತ್ತಿದ್ದೆ ಎಂಬುದೆಲ್ಲ ನಮ್ಮ ಊಹೆಗೆ ಮೀರಿದ್ದಾಗಿತ್ತು. ಒಮ್ಮೊಮ್ಮೆ ನೀನು ಮನೆಗೆ ಬಾರದಿದ್ದಾಗ ರಾತ್ರಿ ವಸತಿಗೆ ನಿನ್ನ ಗೆಳತಿಯರ ಜತೆ ಇರುತ್ತಿದ್ದೆ ಅಂದುಕೊಳ್ಳುತ್ತಿದ್ದೆವು. ನಸುಕಿಗೇ ಬಂದು ಹಾಜರಿ ಹಾಕಿ ಹೋಗುವುದನ್ನು ನೀನು ತಪ್ಪಿಸುತ್ತಿರಲಿಲ್ಲ. ಸ್ವತಂತ್ರ ತಿರುಗಾಟದಿಂದಾಗಿ ನಿನ್ನ ಸಾಮರ್ಥ್ಯದ ಮೇಲೆ ವಿಶ್ವಾಸ ಉಂಟಾಯಿತು. ಹಂತ ಹಂತವಾಗಿ ನೀನು ನಿನ್ನ ಜೀವನವನ್ನು ಸ್ವಾವಲಂಬಿಯಾಗಿ ಸಾಗಿಸುವಂತಾಗಬೇಕೆಂಬ ನಮ್ಮ ಕನಸು ನಿಜವಾಗಿತ್ತು.

ಒಮ್ಮೆ ನಾವು ಮನೆಗೆ ಬೀಗ ಹಾಕಿ ಊರಿಗೆ